ಹೇಳುವುದಕ್ಕೆ, ಕೇಳುವುದಕ್ಕೆ ಕೊಂಚ ವಿಚಿತ್ರ ಅನಿಸಿದರೂ ಹೀಗಾಯಿತೆಂಬುದು ಮಾತ್ರ ಸತ್ಯ. ಭಾಮಾನ ಮಗಳ ಮದುವೆಯ ಪ್ರಸ್ತಾಪ ಇವರು ಅವರ ಊರಿಗೆ ಹೋಗಿ ರಾಜಾತಿಥ್ಯ ಸ್ವೀಕರಿಸಿ ಬರುವುದರಲ್ಲಿ ಮುಕ್ತಾಯವಾಯ್ತು. 'ನಮಗೆ ಒಪ್ಪಿಗೆ ಅಂತ ಹೇಳ್ಲನೇ...' ಹತ್ತು ಸಲ ಕೇಳಿದ್ದ ಭಾಮಾನ ಗಂಡ. 'ತಡೀರಿ, ಅವಸರ ಮಾಡ್ಬೇಡಿ. ಬೇಕಿದ್ರೆ ಅವರೇ ಮೊದಲು ಫೋನ್ ಮಾಡ್ಲಿ...' ಅಂದಿದ್ದಳು ಭಾಮಾ. 'ಕಾಲಿಗೆ ಗೆಜ್ಜೆ ಇಲ್ಲ ಅನ್ನೋದೊಂದು ಬಿಟ್ರೆ ಮದುವೆ... ಮದುವೆ..ಅಂತ ಥಕಥೈ ಕುಣೀತಿದ್ಯಲ್ಲ, ಏನಾಗಿದ್ಯೇ ನಿಂಗೆ?' ಮೂಗಿನ ಮೇಲೆ ಬೆರಳಿಟ್ಟುಕೊಂಡಿದ್ದ ಗಂಡ.

'ಹಾಗಂತ ಆಳ ನೋಡದೆ ನೀರಿಗೆ ತಳ್ಳೋಕಾಗುತ್ತಾ?'

'ಹುಚ್ಚುಚ್ಚಾಗಿ ಮಾತಾಡ್ತಿದ್ದಿ...' ಅಂದಿದ್ದ ಗಂಡ.

ಅಲ್ಲಿಂದ ಸಕಾರಾತ್ಮಕ ನಿಲುವಿನ ಕರೆ ಬಂದರೆ ಏನು ಮಾಡುವುದೆಂದು ಭಾಮಾ ತಲೆ ಕೆಡಿಸಿಕೊಂಡಿದ್ದಳು. ಯುಕ್ತಾಯುಕ್ತ ವಿವೇಚನೆ ಇಲ್ಲದ ಒಂದು ಅಪರಿಪಕ್ವ, ಅಪ್ರಬುದ್ಧ ವಯಸ್ಸು ಅದು. ಹುಟ್ಟಿದ ಪ್ರತಿಯೊಬ್ಬರೂ ದಾಟಿ ಬರಬೇಕಾದ ವಯಸ್ಸು. ದೈಹಿಕವಾಗಿ ಅಲ್ಲದಿದ್ದರೂ ಮಾನಸಿಕವಾಗಿ ನಿಯಂತ್ರಣ ತಪ್ಪುವವರು ಬಹಳಷ್ಟು ಜನ ಇರಬಹುದು. ಹದ್ದು ಮೀರಿದ್ದಳು ಸುಲೋಚನಾ. ಆದರೂ ಪ್ರಾಯದ ಒಂದು ಮಾರ್ಜಿನ್ ಕೊಟ್ಟು ಅವಳನ್ನು ಕ್ಷಮಿಸಬಹುದೇ ಅಥವಾ ಅದು ದುಬಾರಿಯಾಗುತ್ತದೆಯಾ? ಪ್ರಕ್ಷುಬ್ಧ ಕಡಲಾಗಿತ್ತು ಭಾಮಾನ ಮನಸ್ಸು. ಅವಳನ್ನು ನೋಡಿದಾಗಲೆಲ್ಲಾ ತನಗೆ ಹಳೆಯ ನೆನಪು ಮರುಕಳಿಸುವಂತೆ ಈಗ ನಿಶ್ಚಿಂತ ನೆಲೆ ಕಂಡುಕೊಂಡಿರುವ ಅವಳಿಗೂ ಹಳೆಯ ನೆನಪನ್ನು ಗೀರಿದಂತಾಗಲಿಕ್ಕಿಲ್ಲವೇ? ಮುಕ್ತ ಮನಸ್ಸಿನ ಸಂವಹನ ಸಂಬಂಧಗಳ ನಡುವೆ ಸಾಧ್ಯವಾಗಬಹುದೇ? ಅವಳ ಅದೃಷ್ಟ ನೋಡಿದರೆ ಹೊಟ್ಟೆ ಉರಿಯುತ್ತಿರುವುದು ಸುಳ್ಳಲ್ಲ. ಮಹಾರಾಣಿಯಂತೆ ಬದುಕುತ್ತಿದ್ದಾಳೆ ಸುಲೋಚನಾ. ದೇವರ ದೃಷ್ಟಿಯಲ್ಲಿ ನ್ಯಾಯಾನ್ಯಾಯಗಳ ವಿವೇಚನೆ ಹೇಗಿರುತ್ತದೆಯೋ ಯಾರು ಬಲ್ಲರು? ಹಾಗೆಂದುಕೊಳ್ಳುವುದೂ ಒಂದು ಸಮಾಧಾನಕ್ಕಲ್ಲದೆ ಮತ್ತೇನು? ಅಲ್ಲಿ ಏನೇನು ಮಾತುಕತೆ ನಡೆಯಿತೋ, ಮುಂದೆ ಯಾವ ಬೆಳವಣಿಗೆಯೂ ನಡೆಯಲಿಲ್ಲ. ಎಲ್ಲಾ ಅಲ್ಲಿಗಲ್ಲಿಗೆ ತಣ್ಣಗಾಗಿಹೋಯ್ತು. ಮಗಳು ಇದನ್ನೇನಾದರೂ ಮನಸ್ಸಿಗೆ ಹಚ್ಚಿಕೊಂಡರೆ ಎಂದು ಭಾಮಾನಿಗೆ ಕೊಂಚ ಆತಂಕ ಇತ್ತು. ಹಾಗೇನಾಗದೆ ಅವಳು ಯಾವತ್ತಿನಂತೆ ಇದ್ದುದು ಒಂದು ನಿಶ್ಚಿಂತೆ. 'ಆದದ್ದೆಲ್ಲಾ ಒಳಿತೇ ಆಯಿತು' ಎನ್ನುವ ಸಮಾಧಾನ. ಹಾಗಿದ್ದರೂ ಮನಸ್ಸಿನೊಳಗೆ ಹೊರಳಾಡುವ ಎಂತದೋ ಸಂದೇಹ. ಸುಲೋಚನಾಳನ್ನು ಹೊರತುಪಡಿಸಿ ಮತ್ತೆಲ್ಲರೂ ಈ ಸಂಬಂಧಕ್ಕೆ ಉತ್ಸುಕರಾಗಿದ್ದಂತೆ ಕಂಡು ಬರುತ್ತಿದ್ದಿದ್ದು ಹೌದು. ಅಂದಮೇಲೆ ಅವಳೇ ಕಡ್ಡಿ ಹೆಟ್ಟಿರುತ್ತಾಳೆ. ಭಾಮಾನ ಗುರುತು ಗೊತ್ತೇ ಆಗದಂತೆ ನಟಿಸಿದವಳು ಈ ಸಂಬಂಧ ತಪ್ಪಿಸಲು ಮನೆಯವರ ಕಿವಿಯಲ್ಲಿ ಅದೇನೇನು ಊದಿದ್ದಾಳೋ? ಒಂದೊಮ್ಮೆ.. ಒಂದೊಮ್ಮೆ.. ಆ ಕಲ್ಪನೆಯಿಂದಲೇ ಬೆವೆತು ಹೋದಳು ಭಾಮಾ. ಕೋತಿ ಮೊಸರನ್ನ ತಿಂದು ಮೇಕೆಯ ಬಾಯಿಗೆ ಒರೆಸಿದ ಕಥೆಯಾದರೆ? ಲೋಕದಲ್ಲಿ ಯಾವುದೂ ಅಸಾಧ್ಯವಲ್ಲ. ತಾನ್ಯಾಕೆ ಅವಳನ್ನು ವಹಿಸಿಕೊಂಡಿರಬೇಕು? ಹೇಳಬೇಕು ಎಲ್ಲವನ್ನೂ, ಕೊನೆಯಪಕ್ಷ ಗಂಡನ ಹತ್ತಿರ ಗುಟ್ಟಿನಲ್ಲಾದರೂ....

* * *

ಕೆಲವೇ ತಿಂಗಳು. ಭಾಮಾನ ಊಹೆಗೂ ಮೀರಿದ ಘಟನೆ ಆ ಮನೆಯಲ್ಲಿ ನಡೆದು ಹೋಯ್ತು. ಬಾಯಲ್ಲಿ ಬೆರಳಿಟ್ಟರೆ ಕಚ್ಚುವುದಕ್ಕೆ ಬರುವುದಿಲ್ಲ ಎನ್ನುವಷ್ಟು ಅಮಾಯಕಿಯಾಗಿ ಕಾಣುತ್ತಿದ್ದ ಭಾಮಾನ ಮಗಳು ಹೆತ್ತವರಿಗೆ ಒಂದು ಪತ್ರ ಬರೆದಿಟ್ಟು ತನ್ನ ದಾರಿ ಕಂಡುಕೊಂಡಿದ್ದಳು. ಮದುವೆಯಾಗಿ ಒಂದು ಮಗುವಿನ ತಂದೆಯೂ ಆಗಿರುವ ಸಹೋದ್ಯೋಗಿಯೊಬ್ಬನೊಡನೆ ಇವಳು ಪ್ರೀತಿಗೆ ಬಿದ್ದಿದ್ದಾಳೆ. ಹಳೆಯ ಸಂಬಂಧದಿಂದ ಆತ ಬಿಡುಗಡೆ ಹೊಂದುವ ಪ್ರಕ್ರಿಯೆ ಜಾರಿಯಲ್ಲಿದೆ. ಅಲ್ಲಿಯವರೆಗೆ ಕಾಯದೆ ಇಬ್ಬರೂ ಜೊತೆಯಾಗಿ ಬಾಳುವ ನಿರ್ಧಾರ ತೆಗೆದುಕೊಂಡಿದ್ದಾರೆ. 'ಜಾತಿ, ಕುಲ, ಗೋತ್ರ, ಜಾತಕ ಎಂದೆಲ್ಲಾ ಈ ಕಾಲದಲ್ಲೂ ತಲೆ ಕೆಡಿಸಿಕೊಳ್ಳುವ ನೀವು ಈ ಸಂಬಂಧಕ್ಕೆ ಖಂಡಿತಾ ಒಪ್ಪುವುದಿಲ್ಲ ಎಂದು ನನಗೆ ಗೊತ್ತಿದೆ. ಹಾಗಾಗಿ ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುತ್ತಿದ್ದೇನೆ. ಅಪ್ಪಾ, ಅಮ್ಮಾ, ಕ್ಷಮಿಸಿ. ಮದುವೆಯಾಗುವಾಗ ಕರೆಯುತ್ತೇನೆ. ಬಂದು ಆಶೀರ್ವದಿಸಿ..' ಎಂದು ವಿನಂತಿಸಿಕೊಂಡಿದ್ದಳು ಮಗಳು.

●